ಕರ್ನಾಟಕ ಸರ್ಕಾರ

**ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು-1**

ಸಂಖ್ಯೆ: ಸಿ3(7) ಪ್ರಾ..ಶಿ ವರ್ಗ/01/2013-14 ದಿನಾಂಕ;-22-06-2013

**ಸುತ್ತೋಲೆ**

ವಿಷಯ:- ಸರ್ಕಾರಿ ಶಾಲಾ ಶಿಕ್ಷಕರ ವರ್ಗಾವಣೆ ಆಧ್ಯತೆ ಸಂಬಂಧ "ತೀವ್ರ ಅನಾರೋಗ್ಯದಿಂದ ಬಳಲುತ್ತಿರುವ" ಶಿಕ್ಷಕರು ಮತ್ತು ಅವರ [ಪತಿ ಅಥವಾ ಪತ್ನಿ, ಮಕ್ಕಳು] ಅವಲಂಬಿತರ ಪ್ರಕರಣಗಳಿಗಲ್ಲಿ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರಗಳ ಬಗ್ಗೆ ವಿಭಾಗ ಮಟ್ಟದ ತ್ರಿ ಸದಸ್ಯ ಸಮಿತಿಗೆ ಶಿಕ್ಷಕರನ್ನು ತಪಾಸಣೆಗೆ ಹಾಜರುಪಡಿಸಿ ವೈದ್ಯಕೀಯ ಪ್ರಮಾಣ ಪತ್ರದ ಸತ್ಯಾಸತ್ಯತೆಯ ಬಗ್ಗೆ ದಾಖಲೆಗಳನ್ನು ಪರಿಶೀಲಿಸುವ ಬಗ್ಗೆ

ಉಲ್ಲೇಖ:-1.ಸರ್ಕಾರದ ಅಧಿಸೂಚನೆ ಸಂಖ್ಯೆ: ಸಂವ್ಯಶಾಇ 1 ಶಾಸನ 2007 ದಿ:01.09.2007
2.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 173 ಇಟಿಆರ್ 2007 ದಿ:15.10.2007
3.ಸರ್ಕಾರದ ಅಧಿಸೂಚನೆ ಸಂಖ್ಯೆ:ಇಡಿ 173 ಇಟಿಆರ್ 2007 ದಿ:14.11.2007
4.ಸರ್ಕಾರದ ಅಧಿಸೂಚನೆ ಸಂಖ್ಯೆ: ಇಡಿ 37 ಇಟಿಆರ್ 2009 ದಿ:23.04.2011.
5.ಈ ಕಚೇರಿ ಅಧಿಕೃತ ಜ್ಞಾಪನಾ ಪತ್ರ ಸಂಖ್ಯೆ ಸಿ3(7) ಪ್ರಾ.ಶಾ.ಶಿವರ್ಗಾ01/13-14ದಿ04-06-13
6.ಸರ್ಕಾರದ ಅಧೀನ ಕಾರ್ಯದರ್ಶಿಗಳು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ) ರವರ ಪತ್ರ ಸಂಖ್ಯೆ:-ಆಕುಕ.66ಎಂಪಿಎಸ್2012 ದಿ;-03-05-2012
7. ಈ ಕಛೇರಿ ಪತ್ರದ ಸಮ ಸಂಖ್ಯೆ;- ದಿನಾಂಕ;-10-06-2013
8 ಆಯುಕ್ತರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಆನಂದರಾವ್ ವೃತ್ತ, ಬೆಂಗಳೂರು ರವರ ಪತ್ರ ಸಂಖ್ಯೆ;- ಎಂಡಿಎಕ್ಸ್ (2)/181/2013-14 ದಿನಾಂಕ;- 21-06-2013

-*****-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖಗಳನ್ವಯ ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ [ಶಿಕ್ಷಕರ ವರ್ಗಾವಣೆ ನಿಯಂತ್ರಣ] ಅಧಿನಿಯಮ 2007ರ ಪ್ರಕರಣ 6[2][4] ರಲ್ಲಿ ಒಬ್ಬ ಶಿಕ್ಷಕನು ಅಥವಾ ಅವನ/ಅವಳ, ಗಂಡ/ಹೆಂಡತಿಯು ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ಮತ್ತು ಅದಕ್ಕೆ ವೈದ್ಯಕೀಯ ಚಿಕಿತ್ಸೆಯು ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ದೊರೆಯದಿದ್ದಲ್ಲಿ ಮತ್ತು ಅವನಿಗೆ/ಅವಳಿಗೆ ವೈದ್ಯಕೀಯ ಚಿಕಿತ್ಸೆಯ ಸ್ವರೂಪ, ಅವನು/ಅವಳು ಕಾರ್ಯ ನಿರ್ವಹಿಸುತ್ತಿರುವ ಸ್ಥಳದಲ್ಲಿ ಸಂಬಂಧಪಟ್ಟ ಖಾಯಿಲೆಗೆ ವೈದ್ಯಕೀಯ ಚಿಕಿತ್ಸೆ ದೊರೆಯದಿರುವ ಬಗ್ಗೆ ಮತ್ತು ಅಂಥ ವೈದ್ಯಕೀಯ ಚಿಕಿತ್ಸೆ ದೊರೆಯುವ ಸ್ಥಳದ ಬಗ್ಗೆ ಮತ್ತು ಅವನು/ಅವಳು ಅಗತ್ಯ ವೈದ್ಯಕೀಯ ಚಿಕಿತ್ಸೆ ಪಡೆಯಲು ಅಂಥ ಸ್ಥಳಕ್ಕೆ ವರ್ಗಾವಣೆ ಮಾಡುವುದು ಅವಶ್ಯವಿದೆ ಎಂಬುದರ ಬಗ್ಗೆ ನಿರ್ದಿಷ್ಟವಾಗಿ ತಿಳಿಸಿರುವ ಜಿಲ್ಲಾ ವೈದ್ಯಕೀಯ ಮಂಡಳಿಯ ಪ್ರಮಾಣ ಪತ್ರವನ್ನು ಸಂಬಂಧಪಟ್ಟ ಶಿಕ್ಷಕರು ಹಾಜರುಪಡಿಸದ ಹೊರತು ಅಂಥ ವರ್ಗಾವಣೆಯನ್ನು ಮಾಡತಕ್ಕದ್ದಲ್ಲ ಎಂಬ ನಿಯಮವಿದೆ.

ಕರ್ನಾಟಕ ರಾಜ್ಯ ಸಿವಿಲ್ ಸೇವೆಗಳ [ಶಿಕ್ಷಕರ ವರ್ಗಾವಣೆ ನಿಯಂತ್ರಣ ನಿಯಮಗಳು 2007ರ ನಿಯಮ 7 ರಲ್ಲಿ ,ಶಿಕ್ಷಕರ ವರ್ಗಾವಣೆಗೆ ಆದ್ಯತಾ ಪಟ್ಟಿಯ ಸಿದ್ಧತೆಯ ಬಗ್ಗೆ ಸೂಚನೆ ಇರುತ್ತದೆ. ಉಪ ನಿಯಮ 7ರಲ್ಲಿ ಶಿಕ್ಷಕರ ವರ್ಗಾವಣೆ ಆದ್ಯತಾ ಪಟ್ಟಿಯ ಸಿದ್ಧತೆಯ ಬಗ್ಗೆ ಸೂಚನೆ ಇರುತ್ತದೆ. ಉಪನಿಯಮ [1] [ಎ] ರಲ್ಲಿ ಅಧಿನಿಯಮ 6ನೇ ಪ್ರಕರಣದ [2ನೇ] ಉಪ ಪ್ರಕರಣ [4]ನೇ ಖಂಡದ ಪ್ರಕಾರ ಅತ್ಯಂತ ತೀವ್ರ ಖಾಯಿಲೆಯ [Terminaly ill] ರೋಗಿಗಳು, ಗಂಭೀರ ಖಾಯಿಲೆ ಪ್ರಕರಣಗಳು, ಮೊದಲ ಆದ್ಯತೆಯಲ್ಲಿ ಪರಿಗಣಿಸಲು ಅವಕಾಶವಿರುತ್ತದೆ.

ಉಲ್ಲೇಖ (7) ರಲ್ಲಿ ಹಿಂದಿನ ಸಾಲಿನಲ್ಲಿ ತಿಳಿಸಿರುವಂತೆ 2013-14 ನೇ ಸಾಲಿನಲ್ಲಿಯೂ ಸಹ ಜಿಲ್ಲಾ ಮಟ್ಟದಲ್ಲಿ ವೈದ್ಯಾಧಿಕಾರಿಗಳ ತ್ರಿ ಸದಸ್ಯ ಸಮಿತಿಯನ್ನು ರಚಿಸುವುದು ಅಗತ್ಯವಾಗಿದೆ, ಹಾಗೂ ಜಿಲ್ಲಾ ಮಟ್ಟದಲ್ಲಿ ವೈದ್ಯಕೀಯ ಮಂಡಳಿಯು ನೀಡಿರುವ ವೈದ್ಯಕೀಯ ಪ್ರಮಾಣದಲ್ಲಿ ತಿಳಿಸಿರುವ ತೀವ್ರತರ ಖಾಯಿಲೆಗಳ (ಕ್ಯಾನ್ಸರ್, ಕಿಡ್ನಿ ವೈಫಲ್ಯ, ಹೃದಯ ಸಂಬಂದಿ ಖಾಯಿಲೆಗಳ) ಬಗ್ಗೆ ವಿಭಾಗೀಯ ಮಟ್ಟದಲ್ಲಿ ವೈದ್ಯಾಧಿಕಾರಿಗಳ ತ್ರಿ ಸದಸ್ಯ ಸಮಿತಿಯನ್ನು ರಚಿಸುವುದು ಹಾಗೂ ಈ ಬಗ್ಗೆ ತಮ್ಮ ಇಲಾಖಾ ವತಿಯಿಂದ ಬೆಂಗಳೂರು, ಮೈಸೂರು, ಬೆಳಗಾವಿ, ಗುಲ್ಬರ್ಗಾ ವಿಭಾಗಗಳ ಸಂಬಂಧ ಪಟ್ಟ ಪ್ರಾಧಿಕಾರಿಗಳಿಗೆ ಸೂಚನೆ ನೀಡಲು ಮತ್ತು ತಪಾಸಣೆ ಹಾಗೂ ದಾಖಲೆಗಳ ಸತ್ಯಾಸತ್ಯತೆಯನ್ನು ನಡೆಸಿ ಸಂಬಂಧ ಪಟ್ಟ ದಾಖಲೆಗಳ ಬಗ್ಗೆ ಟಿಪ್ಪಣಿ ಮಾಡಿ ವೈದ್ಯಕೀಯ ಪ್ರಮಾಣ ಪತ್ರವನ್ನು

ದೃಡೀಕರಿಸಿ ಕೊಡುವಂತೆ ಕೋರಲಾಗಿತ್ತು ಉಲ್ಲೇಖ (8) ರನ್ವಯ ಮಾನ್ಯ ಆಯುಕ್ತರು ವೈದ್ಯಕೀಯ ಮಂಡಳಿ ಬೆಂಗಳೂರು ರವರು ಸಂಬಂಧ ಪಟ್ಟ ಆಯಾ ವಿಭಾಗೀಯ ಮಟ್ಟದಲ್ಲಿ ವೈದ್ಯಕೀಯ ಮಂಡಳಿ ರಚಿಸಿ ವರದಿ ನೀಡಲು ಸೂಚಿಸಿರುತ್ತಾರೆ.

2013–14 ನೇ ಸಾಲಿನಲ್ಲಿ ಅಂತರ ಘಟಕ ಮತ್ತು ಘಟಕದೊಳಗೆ ವರ್ಗಾವಣೆ ಬಯಸಿ ಅರ್ಜಿ ಸಲ್ಲಿಸಿರುವ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲಾ ಶಿಕ್ಷಕರು ತೀವ್ರತರ ಖಾಯಿಲೆ ಪ್ರಕರಣದಲ್ಲಿ (ಕ್ಯಾನ್ಸರ್, ಕಿಡ್ನಿ ವೈಪಲ್ಯ, ಹೃದಯ ಸಂಬಂದಿ ಖಾಯಿಲೆಗಳಿಗೆ ) ಶಿಕ್ಷಕರು ದಿನಾಂಕ;– 22–06–2013 ರಿಂದ 25–06–2013 ರ ಒಳಗಾಗಿ ಆಯಾಯ ವಿಭಾಗದ ಜಿಲ್ಲೆಗಳಿಂದ ಅರ್ಜಿ ಸಲ್ಲಿಸಿರುವ ಶಿಕ್ಷಕರು ಆಯಾಯ ವಿಭಾಗದಿಂದಲೇ ವಿಭಾಗೀಯ ಮಟ್ಟದ ಜಿಲ್ಲಾ ಆಸ್ಪತ್ರೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗಲು (ಉಪನಿರ್ದೇಶಕರು ಸಾ.ಶಿಇ. ಕ್ಷೇತ್ರ ಶಿಕ್ಷಣಾಧಿಕಾರಿಗಳ ಮೂಲಕ) ಶಿಕ್ಷಕರಿಗೆ ದೂರವಾಣಿ ಮೂಲಕ ಸೂಚಿಸುವುದು. ಮತ್ತು ಕಛೇರಿಯ ಸೂಚನಾ ಫಲಕದಲ್ಲಿ ಪ್ರಕಟಿಸುವುದು ಆಯಾ ವಿಭಾಗದಿಂದ ಶಿಕ್ಷಕರು ಆಯಾ ವಿಭಾಗದ ನಿರ್ದೇಶಕರ ಕಛೇರಿಯಲ್ಲಿ ಹಾಜರಾಗಿ ನೋಡಲ್ ಅಧಿಕಾರಿಗಳನ್ನು ಸಂಪರ್ಕಿಸುವುದು. ಸದರಿ ಅಯುಕ್ತಾಯದಿಂದ ಜಿಲ್ಲಾ ಆಸ್ಪತ್ರೆಗೆ ಒಬ್ಬ ನೋಡಲ್ ಅಧಿಕಾರಿಯನ್ನು ನಿಯೋಜಿಸಿ ವೈದ್ಯಕೀಯ ತಪಾಸಣೆ ನಡೆಸಲು ಅಗತ್ಯ ಕ್ರಮ ವಹಿಸುವುದು. ತಪಾಸಣೆ ಮುಗಿದ ನಂತರ ಯಾವ ವಿಭಾಗಕ್ಕೆ ವರ್ಗಾವಣೆ ಕೋರಿ ಅರ್ಜಿ ಸಲ್ಲಿದ್ದಾರೊ ಆ ವಿಭಾಗದಲ್ಲಿ ಕೌನ್ಸಿಲಿಂಗೆ ಹಾಜರಾಗಲು ಸೂಚಿಸುವುದು.

ಹಾಗೂ ವಿಭಾಗ ಮಟ್ಟದ ವೈದ್ಯಕೀಯ ಮಂಡಳಿಯು ತಪಾಸಣೆ ಮಾಡಿ ನಂತರ ನೀಡಿರುವ ವೈದ್ಯಕೀಯ ಪ್ರಮಾಣ ಪತ್ರವನ್ನು ಸಂಬಂಧಿಸಿದ ಆಯುಕ್ತಾಲಯದಿಂದ ಕ್ರೋಢೀಕರಿಸಿ ಶಿಕ್ಷಕರು ಅರ್ಜಿ ಸಲ್ಲಿಸಿರುವ ವಿಭಾಗಕ್ಕೆ ಇ–ಮೇಲ್ ಮೂಲಕ ಕಳುಹಿಸಿ ಕೊಡಲು ತಿಳಿಸಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು
22/6

ಗೆ,

1, ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಗುಲ್ಬರ್ಗಾ ಗುಲ್ಬರ್ಗಾ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

2, ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ಧಾರವಾಡ (ಬೆಳಗಾವಿ) ಧಾರವಾಡ ಜಿಲ್ಲೆ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

3, ನಿರ್ದೇಶಕರು (ಪ್ರೌಢ ಶಿಕ್ಷಣ) ಆಯುಕ್ತರ ಕಛೇರಿ ಸಾ,ಶಿ.ಇ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

4 ನಿರ್ದೇಶಕರು (ಪ್ರಾಥಮಿಕ ಶಿಕ್ಷಣ) ಆಯುಕ್ತರ ಕಛೇರಿ ಸಾ,ಶಿ.ಇ ಬೆಂಗಳೂರು ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

5. ನಿರ್ದೇಶಕರು ಪ್ರಾಥಮಿಕ, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ ಸಾ,ಶಿ.ಇ ಗುಲ್ಬರ್ಗಾ ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

6 ನಿರ್ದೇಶಕರು ಪ್ರಾಥಮಿಕ, ಪ್ರೌಢ ಶಿಕ್ಷಣ, ಆಯುಕ್ತರ ಕಛೇರಿ ಸಾ,ಶಿ.ಇ ಧಾರವಾಡ (ಬೆಳಗಾವಿ) ರವರ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ

7. ಎಲ್ಲಾ ಉಪನಿರ್ದೇಶಕರು (ಆಡಳಿತ) – ಸೂಕ್ತ ಕ್ರಮಕ್ಕಾಗಿ